## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 433/2019**

| | | |
|---|---|---|
| ಸಾಕ್ಷಿದಾರರ ಹೆಸರು | ನಾಗೇಂದ್ರ | ಪ್ರಮಾಣ ವಚನ ಬೋಧಿಸಿದ<br>ದಿನಾಂಕಃ 31.07.2026 |
| ತಂದೆಯ ಹೆಸರು/<br>ಗಂಡನ ಹೆಸರು | ದೇವಪ್ಪ | |
| ವಯಸ್ಸು | 46 ವರ್ಷ | |
| ಉದ್ಯೋಗ | ವ್ಯವಸಾಯ | ಚಾಸಾಃ 3<br>ಪ್ರಾಸಾಃ 2 |
| ವಾಸ | ಹಂಗಳಪುರ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು ಈಗ ಮಹಜರ್ ನ್ನು ನೋಡುತ್ತಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದಿರುವ ವಿಷಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನನ್ನನ್ನು ಹೊರತುಪಡಿಸಿ ಮತ್ತೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(ಈಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎಪಿಪಿರವರಿಂದಃ**

ದಿನಾಂಕ 18.07.2019 ರಂದು ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಾಮರಾಜನಗರ ಮುಖ್ಯ ರಸ್ತೆ ಶಿವಾನಂದ ಸರ್ಕಲ್ ಬಳಿ ಬೆಳಗ್ಗೆ ಸುಮಾರು 11.15 ಗಂಟೆ ಸಮಯದಲ್ಲಿ ಚಾಸಾ-1 ರವರು ದಾಳಿ ನಡೆಸಿದ ಸಮಯದಲ್ಲಿ ನಾನು ಹಾಜರು ಇದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1ನೇ ಆರೋಪಿಯು 2ನೇ ಆರೋಪಿಯ ಜೊತೆ ಸೇರಿ ಅವರ ಬಾಬ್ತು ಓಮಿನಿ ಕಾರು ನಂಃ ಕೆಎಲ್-08-ಎನ್-1888 ರಲ್ಲಿ ಸಾರ್ವಜನಿಕರಿಗೆ ವಿತರಣೆ ಮಾಡುವ ಸುಮಾರು 28 ಮೂಟೆ ಪಡಿತರ ಅಕ್ಕಿಯನ್ನು ಅದರ ತೂಕ 7 ಕ್ವಿಂಟಾಲ್ 87 ಕೆಜಿ ಅಕ್ಕಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಅನಧಿಕೃತವಾಗಿ ದಾಸ್ತಾನು ಮಾಡಿಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ತೆಗೆದುಕೊಂಡು ಹೋಗುತ್ತಿದ್ದಿರೆಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾಸಾ-1 ರವರು ಸದರಿ 87 ಕೆ.ಜಿ ಅಕ್ಕಿಯನ್ನು ಹಾಗೂ ಓಮಿನಿ ಕಾರನ್ನು ಅಮಾನತ್ತುಪಡಿಸಿಕೊಂಡು ನಿಪಿ-2 ರಂತೆ ಮಹಜರ್ ಮಾಡಿರುತ್ತಾರೆಂದರೆ ಸರಿಯಲ್ಲ.

ಈಗ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ   ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್  ಜಡ್ಜ್   ಜೆಎಂಎಫ್ ಸಿ
ಗುಂಡ್ಲುಪೇಟೆ.